**1ನೇ ಹೆಚ್ಚುವರಿ ಸಿವಿಲ್ ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 115/2025**

| ಪಿರ್ಯಾದುದಾರರು : | ವಿರುದ್ಧ | ಆರೋಪಿತರು: |
|---|---|---|
| ಚನ್ನಗಿರಿ ಪೊಲೀಸ್ ಠಾಣೆ | | ಎ1. ಹೇಮಂತ ಬಿನ್ ನಾಗಪ್ಪ<br>ವಯಸ್ಸುಃ 39 ವರ್ಷ<br>ವಾಸಃ ಗಂಗಗೊಂಡನಹಳ್ಳಿ ಗ್ರಾಮ ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ,<br>ಎ2. ಆಶಾ ಕೋಂ ಹೇಮಂತ<br>ವಯಸ್ಸುಃ 26 ವರ್ಷ<br>ವಾಸಃ ಗಂಗಗೊಂಡನಹಳ್ಳಿ ಗ್ರಾಮ ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ,<br>ಎ3. ಪ್ರವೀಣ ಬಿನ್ ಶಿವಪ್ಪ<br>ವಯಸ್ಸುಃ 24 ವರ್ಷ<br>ವಾಸಃ ಮುದಿಗೆರೆ ಗ್ರಾಮ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ, |

**<u>ದೋಷಾರೋಪಣೆ</u>**

ನಾನು **ಶ್ರೀಮತಿ ಮಹಾಲಕ್ಷ್ಮಿ ಜಿ** 1ನೇ ಹೆಚ್ಚುವರಿ ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಮೊದಲನೆಯದಾಗಿ ದಿಃ 13-03-2024 ರಂದು ಮದ್ಯಾಹ್ನ 1.10 ಗಂಟೆಯಲ್ಲಿ ಚಾಸಡಾ-1 ರವರು ಚನ್ನಗಿರಿ ಪೊಲೀಸ್ ಠಾಣೆಯ ಆವರದಲ್ಲಿನಪೊಲೀಸ್ ಇನ್ಸ್ ಪೆಕ್ಟರ್ ಕೊಠಡಿಯ ಪಕ್ಕದ ಖಾಲಿ ಜಾಗದಲ್ಲಿ ಸಂಬಂಧಪಟ್ಟ ಪಿ ಡಿ ಓ ರರಲಿ ಪೋನ್ ನಲ್ಲಿ ಮಾತನಾಡುತ್ತಿರುವಾಗ 1 ನೇ ಆರೋಪಿಯಾದ ನೀನು ಠಾಣೆಯಿಂದ ಚಾಸಾ-1 ರವರ ಹತ್ತಿರ ಏಕಾ ಏಕಿ ಹೋಗಿ ನೀನು ಯಾವ ಸೂಳೆಮಗನೋ ನಮ್ಮ ಸೈಟಿನ ಬಗ್ಗೆ ಮಾತನಾಡಲು ಎಂದು ಅವಾಚ್ಯ ಶಬ್ದಗಳಿಂದ ಬೈಯುವ ಮೂಲಕ ಭಾ.ದಂ.ಸಂ.ಕಲಂ 504 ಸಹ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ  1ನೇ ಆರೋಪಿಯಾದ ನೀನು 2 ಮುತ್ತ 3ನೇ ಅರೋಪಿತರಿಗೆ ತಾನಿದ್ದ ಸ್ದಳಕ್ಕೆ ಕರೆಯಿಸಿಕೊಂಡು ಚಾಸಾ-1 ರವಗೆ ಸೂಳೆಮಗನಿಗೆ ಹೋಡಿರಿ ಎಂದು ಕುಮ್ಮಕ್ಕು ನೀಡಿದ್ದರಿಂದ ಮೂಲಕ ಭಾ.ದಂ.ಸಂ.ಕಲಂ 355 ಸಹ ಕಲಂ 34ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಮೂರನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು  2 ನೇ ಆರೋಪಿತಳಾದ ನೀನು  ತಾನು ಕಾಲಲ್ಲಿ ಹಾಕಿಕೊಂಡಿದ್ದ ಚಪ್ಪಲಿಯಿಂದ  ಚಾಸಾ-1 ರವರ ತಲೆಗೆ ಮುಖಕ್ಕೆ ಹೊಡೆದು ಸಾರ್ವಜನಿಕವಾಗಿ ಚಾಸಾ-1 ರವರ ಮಾನಕ್ಕೆ ದಕ್ಕೆ ಉಂಟು ಮಾಡಿದ್ದು ಮತ್ತು 3ನೇ ಅರೋಪಿತರು ಚಾಸಾ-1 ರವರ ಎಡಕೈ  ಹಿಡಿದು ತಿರುವಿ ಎಡ ಕೈ ಬೆರಳು ಮುರಿದು ಕಲ್ಲಿನಿಂದ  ಎದೆಗೆ ಗುದ್ದಿ  ಸ್ವರೂಪದ ಗಾಯವುಂಟು ಮಾಡಿದ್ದು ಜಗಳ ಬಿಡಿಸಲು ಬಂದ ಚಸಾ-4 ವರಿಗೆ ನೀನು ಚಾಸಾ-1 ರವರ ಜೊತೆಗೆ ಸೇರಿಕೊಂಡು ನಮ್ಮ ವಿರುದ್ದವೇ ಮಾತನಾಡುತ್ತೀಯ ಎಂದು ಹೇಳುತ್ತಾ ತಾನು ಕಾಲಿನಲ್ಲಿ ಹಾಕಿಕೊಂಡಿದ್ದ ಚಪ್ಪಲಿಯಿಂದ ಚಾಸಾ-4 ರವರ ತಲೆಗೆ ಹೋಡದರು ಸ್ವಾಶಜನಿಕವಾಗಿ ಚಾಸಾ-4 ರವರ ಮಾನಕ್ಕೆ ಧಕ್ಕೆ ಉಂಟು ಮಾಡಿರುವುದರಿಂದ   ಭಾ.ದಂ.ಸಂ.ಕಲಂ 323,324  ಸಹ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ   1 ನೇ ಆರೋಪಿಯಾದ  ನೀನು ಚಾಸಾ1 ರವರಿಗೆ  ನಿನ್ನನ್ನು ಇಷ್ಟಕ್ಕೆ ಬಿಡುವುದಿಲ್ಲ ನನಗೆ ಇನ್ನೂ ಬಾಡಿಗೆ ಜನಗಳು ಇದ್ದಾರೆ ಅವರನ್ನು ಕರೆಯಿಸಿ ಕೊಲೆ ಮಾಡುತ್ತೇನೆ ಎಂದು ಜೀವ ಬೆದರಿಕೆ ಹಾಕುವ  ಮೂಲಕ   ಭಾ.ದಂ.ಸಂ. ಕಲಂ 506 ಸಹ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ  ಸಂಜ್ಞಾನದೊಳಗೆ  ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ.

ದಿನಾಂಕ: 28-06-2025

1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನಗಿರಿ.

**1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ,**

**ನ್ಯಾಯಾಲಯದಲ್ಲಿ**

**ಸಿಸಿ ನಂ: 115/2025**

**1. ಕರ್ನಾಟಕ ಸರ್ಕಾರ (ಚನ್ನಗಿರಿ ಪಿ.ಎಸ್ )**

**ವಿರುದ್ಧ**

ಎ3. ಪ್ರವೀಣ ಬಿನ್ ಶಿವಪ್ಪ
ವಯಸ್ಸುಃ 24 ವರ್ಷ

ವಾಸಃ ಮುದಿಗೆರೆ ಗ್ರಾಮ, ಚನ್ನಗಿರಿ ತಾಲ್ಲೂಕು,
ದಾವಣಗೆರೆ ಜಿಲ್ಲೆ.

## ಆರೋಪಿಯ ಹೇಳಿಕೆ

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದೆನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತನಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 28-06-2025 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ಸ್ಥಳಃ ಚನ್ನಗಿರಿ
ದಿನಾಂಕಃ28-06-2025

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನಗಿರಿ.